
### ಹಿಂದೂಧರ್ಮ ಮತ್ತು ಮೌಲ್ಯಗಳ ಪ್ರಾಥಮಿಕ ಪಾಠ್ಯ

# ‘ಸನಾತನ ಧರ್ಮ’

ಬನಾರಸ್ ಹಿಂದೂ ಕಾಲೇಜಿನ ಧರ್ಮದರ್ಶಿ ಮಂಡಳಿಯಿಂದ ನೂರು ವರ್ಷಗಳ ಹಿಂದೆ ಪ್ರಕಟಿತವಾದ ಗ್ರಂಥವೇ **‘ಸನಾತನ ಧರ್ಮ’**. ಇದು ಅಂತರ್ಜಾಲದಲ್ಲಿ ಡಿಜಿಟಲ್ ರೂಪದಲ್ಲಿ ಲಭ್ಯವಾಗಿದೆ; ಹಳೆಯ ಕೆಲವು ಗ್ರಂಥಾಲಯಗಳಲ್ಲಿ ಇದರ ಪ್ರತಿಗಳು ಲಭ್ಯವಿದ್ದರೂ ಇರಬಹುದು. ಅನುವಾದಕರಾದ ಶ್ರೀ ಶಾಂತಿನಾಥರು ಹೇಳುವಂತೆ, ‘‘ಈ ಪುಸ್ತಕದ ಆವಶ್ಯಕತೆ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ ಎಂಬ ಅರಿವಿನಿಂದ ಮೂಲದ ಭಾವಕ್ಕೆ ಮತ್ತು ಆಶಯಗಳಿಗೆ ಚ್ಯುತಿ ಬಾರದಂತೆ, ಕನ್ನಡಕ್ಕೆ ಭಾಷಾಂತರಿಸಲು ಪ್ರಯತ್ನಿಸಿದ್ದೇನೆ.’’ ಬೆಂಗಳೂರಿನ ಸದಾತನ ಪ್ರಕಾಶನವು ಇದನ್ನು ಪ್ರಕಟಿಸಿದೆ. ಮೂಲತಃ ಈ ಗ್ರಂಥವು ಒಂದು ಪಠ್ಯಪುಸ್ತಕವಾಗಿದೆ.

ಈ ಗ್ರಂಥದಲ್ಲಿ ಮೂರು ಭಾಗಗಳಿವೆ. ೧) ಹಿಂದೂ ಧರ್ಮದ ಮೂಲಭೂತ ಚಿಂತನೆಗಳು. ೨) ಹಿಂದೂ ಧಾರ್ಮಿಕ ಸಂಪ್ರದಾಯಗಳು ಮತ್ತು ಆಚರಣೆಗಳು. ೩) ನೀತಿ ಬೋಧನೆಗಳು.

ಮೊದಲನೆಯ ಭಾಗದಲ್ಲಿ ೬ ಅಧ್ಯಾಯಗಳಿವೆ: ‘ಇರುವುದು ಒಂದೇ’, ‘ಬಹುತ್ವ’, ‘ಪುನರ್ಜನ್ಮ’, ‘ಕರ್ಮ’, ‘ಯಜ್ಞ’ ಹಾಗೂ ‘ದೃಶ್ಯಾದೃಶ್ಯ ಲೋಕಗಳು’. ಈ ಅಧ್ಯಾಯಗಳ ಹೆಸರುಗಳೇ ವಿಷಯವನ್ನು ಸ್ಪಷ್ಟಪಡಿಸುತ್ತವೆ. ಮೊದಲನೆಯ ಅಧ್ಯಾಯ ಆರಂಭವಾಗುವ ಮೊದಲೇ ‘ಪರಿಚಯ’ ಎಂಬ ಒಂದು ಸಣ್ಣ ಪೀಠಿಕೆ ಇದೆ. ಇದರಲ್ಲಿ ಸನಾತನ ಧರ್ಮದ ಮೂಲಭೂತ ಅಂಶಗಳಾದ ವೇದ, ಉಪನಿಷತ್ತು, ಸ್ಮೃತಿಗಳು, ದರ್ಶನಗಳು ಮುಂತಾದ ವಿಷಯಗಳ ಪರಿಚಯವಿದೆ. ಹಿಂದೂ ಧರ್ಮದ ವಿಸ್ತೃತವಾದ ವಿವರಣೆಗೆ ಇದು ಉತ್ತಮ ಪ್ರವೇಶವಾಗಿದೆ. ಉಳಿದ ೬ ಭಾಗಗಳಲ್ಲಿ ಸನಾತನ ಧರ್ಮದ ಪ್ರಧಾನ ತತ್ತ್ವಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಎಲ್ಲವೂ ಮೂಲದಿಂದ ವಿಕಸನ ಹೊಂದುತ್ತ ಬಂದು, ವಿಶಾಲ ವಿಶ್ವವಾಗುವ ಹಿಂದೂಧರ್ಮದ ಪ್ರಕ್ರಿಯೆಗೆ ಅನುಗುಣವಾಗಿ, ಮೊದಲಿಗೆ ಮೂಲತತ್ತ್ವ, ಅನಂತರ ಅದರಿಂದ ಹೊರಟ ಇತರ ಅಂಗೋಪಾಂಗಗಳನ್ನು ವಿವರಿಸುವ ಕ್ರಮ ಇಲ್ಲಿನದು.




**ಕೃತಿ:** ಸನಾತನ ಧರ್ಮ
**ಅನುವಾದಕರು :** ಎನ್.ಎಂ. ಶಾಂತಿನಾಥ
**ಪ್ರಕಾಶನ :** ಸದಾತನ
ಎಸ್‌ಎಫ್-1, ಶ್ರೀ ಲಕ್ಷ್ಮೀ ರೆಸಿಡೆನ್ಸಿ, ದೇವನಾಥಚಾರ್ ಬೀದಿ, ಬೆಂಗಳೂರು - 18
ಮೊ.: 9483535354
**ಬೆಲೆ:** 222/- **ಪುಟ:** 222

ಎರಡನೇ ಭಾಗದಲ್ಲಿ ೭ ಭಾಗಗಳಿವೆ: ‘ಸಂಸ್ಕಾರಗಳು’, ‘ಶ್ರಾದ್ಧ’, ‘ಶೌಚ’, ‘ದೈನಂದಿನ ಪಂಚಯಜ್ಞಗಳು’, ‘ಉಪಾಸನೆ’, ‘ನಾಲ್ಕು ಆಶ್ರಮಗಳು’, ಮತ್ತು ‘ನಾಲ್ಕು ವರ್ಣಗಳು ಅಥವಾ ಜಾತಿಗಳು’. ಈ ಅಧ್ಯಾಯಗಳು ಹಿಂದೂಧರ್ಮದ ವಿವಿಧ ಸಂಪ್ರದಾಯ, ಪಂಥ, ಆಚರಣೆ, ಪದ್ಧತಿಗಳನ್ನು ಸಂಕ್ಷಿಪ್ತವಾಗಿ ವಿವರಿಸುತ್ತವೆ. ಪ್ರತಿ ಅಧ್ಯಾಯಗಳ ಕೊನೆಗೆ ಆಯಾ ವಿಚಾರವನ್ನು ವಿವರಿಸುವ ಪ್ರಾತಿನಿಧಿಕ ಶ್ಲೋಕಗಳನ್ನು ಅನುವಾದದೊಂದಿಗೆ ನೀಡಿರುವುದು ಇಲ್ಲಿನ ವಿಶೇಷ. ಇದರಿಂದ ವಿಷಯದ ಸ್ಪಷ್ಟತೆ ಹಾಗೂ ಅಧಿಕೃತತೆ ಸಾಧಿತವಾಗುತ್ತದೆ.

ಮೂರನೇ ಭಾಗದಲ್ಲಿ ೧೧ ಅಧ್ಯಾಯಗಳಿವೆ. ಈ ಅಧ್ಯಾಯಗಳ ಶೀರ್ಷಿಕೆಗಳು ಅವುಗಳ ವಿಷಯವೇನೆಂಬುದನ್ನು ಸ್ಪಷ್ಟವಾಗಿ ತಿಳಿಸಿಕೊಡುವುದರಿಂದ ನೇರವಾಗಿ ನಮಗೆ ತಿಳಿಯಬೇಕಾದ ಅಧ್ಯಾಯವನ್ನು ನೋಡಬಹುದು; ಈ ಮೂಲಕ ಈ ಕೃತಿಯು ಒಂದು ಪರಾಮರ್ಶನ ಗ್ರಂಥದಂತೆಯೂ ನೆರವಾಗುತ್ತದೆ. ಇಲ್ಲಿನ ಅಧ್ಯಾಯಗಳು ಹೀಗಿವೆ: ‘ನೀತಿಶಾಸ್ತ್ರ ಎಂದರೇನು?’, ‘ಧರ್ಮದ ನೆಲೆಯಲ್ಲಿ ನೀತಿಶಾಸ್ತ್ರದ ಮೂಲತತ್ತ್ವಗಳು’, ‘ಸರಿ ಮತ್ತು ತಪ್ಪು’, ‘ನೀತಿಶಾಸ್ತ್ರದ ಮಾನದಂಡಗಳು’, ‘ಸದ್ಗುಣಗಳು’, ‘ಆನಂದ ಮತ್ತು ಸಂತೋಷ’, ‘ಸ್ವಕೇಂದ್ರಿತ ಸದ್ಗುಣಗಳು’, ‘ದೊಡ್ಡವರೊಡನೆ ಹೇಗಿರಬೇಕು?’, ‘ಸಮಾನರಾದವರೊಡನೆ ಹೇಗಿರಬೇಕು?’, ‘ಕಿರಿಯವರೊಡನೆ ಹೇಗಿರಬೇಕು?’, ‘ಗುಣ-ಅವಗುಣಗಳ ಪರಸ್ಪರ ಪ್ರಕ್ರಿಯೆ’. ಈ ಕೃತಿಯ ಲೇಖಕರು ಯಾರೆಂಬುದು ಮೂಲಗ್ರಂಥದಲ್ಲಿಯೇ ದಾಖಲಾಗಿಲ್ಲ. ಆದರೆ ಈ ಕೃತಿ ಸಾಕಷ್ಟು ಹೆಸರುವಾಸಿಯಾಗಿತ್ತು; ಕಾರಣ ಇದರ ವಿಷಯ ಸಮಗ್ರತೆ ಹಾಗೂ ಸರಳ ನಿರೂಪಣ ಶೈಲಿ. ಇದನ್ನು ಕನ್ನಡಕ್ಕೆ ತರುವಲ್ಲಿ ಅನುವಾದಕರು ಈ ಸರಳತೆ ಹಾಗೂ ಸ್ಪಷ್ಟತೆಯನ್ನು ಗಮನದಲ್ಲಿಟ್ಟುಕೊಂಡಿದ್ದಾರೆ. ಸನಾತನ ಧರ್ಮ, ಹಿಂದೂಧರ್ಮ ಇದರ ವಿಷಯವಾಗಿ ಸಾಕಷ್ಟು ಚರ್ಚೆಗಳಾಗುತ್ತಿರುವ ಈ ಸಂದರ್ಭದಲ್ಲಿ ಈ ಕುರಿತು ನಮಗೆ ಮೂಲಭೂತ ತಿಳಿವಳಿಕೆ ಇರಬೇಕಾದುದು ಅಗತ್ಯ. ಈ ಅರಿವು ನಮ್ಮಲ್ಲಿರುವ ಹಲವು ತಪ್ಪು ತಿಳಿವಳಿಕೆಗಳನ್ನು ನಿವಾರಿಸುವುದು ಹಾಗೂ ನಮ್ಮ ಧರ್ಮದ ಹಿರಿಮೆಯನ್ನು ಮನಗಾಣಿಸುವುದು. ❋